‘ನಿಜ... ನರ್ಸಿಂಗ್ ಹೋಂ ಇರಲಿ... ಎಲ್ಲಿಯಾದರೂ ಸರಿ... ನಾನೇನು ತಾನೇ ಕೆಲಸ ಮಾಡಬಲ್ಲೆ? ಅಡುಗೆ ಕೂಡ ನೆಟ್ಟಗೆ ಮಾಡಲಾರೆ..’

‘ಅರೆ... ನೀವೇನು ಮಾಡಬೇಕಿಲ್ಲ... ರಿಸೆಪ್ಷನ್ ಡೆಸ್ಕ್ ಹಿಂದೆ ಕೂತು... ಬಂದವರೆಡೆ ಒಂದು ನಗೆ ಬೀರಿ, ಯಾವ ಡಾಕ್ಟರ್ ಬಳಿ ಅಪಾಯಿಂಟ್‌ಮೆಂಟ್ ತೊಗೊಂಡಿದ್ದಾರೆ... ಅದಕ್ಕೆ ಅವರು ಎಲ್ಲಿ ಹೋಗಬೇಕು, ಕೊಠಡಿ ಸಂಖ್ಯೆ ಏನು ಎಂದು ಹೇಳಿ ಕಳಿಸಿದರೆ ಸಾಕು... ಬಂದ ರೋಗಿಗಳ ಕಾಯಿಲೆ ಅರ್ಧ ವಾಸಿಯಾಗುತ್ತದೆ’ ಅತ್ತ ಕಡೆಯಿಂದ ವಿಶ್ವಾಸ್ ಉದ್ದಕ್ಕೆ ಹೇಳಿದಾಗ ತಲೆಯಾಡಿಸಿದೆ. ಅವನೊಡನೆ ಮಾತನಾಡುತ್ತಿದ್ದರೆ ಫೋನ್ ಎಂದು ಕೂಡ ಮರೆತು ಹೋಗುತ್ತದೆ... ಮೈ ಬೆಚ್ಚಗಾಯಿತು...

‘ಓ... ಸುಮ್ಮನೆ... ನನ್ನ ಕಾಲೆಳೆಯಬೇಡಿ’

‘ಯಾವಾಗ ಸಿಗ್ತೀರಿ?... ನಿಮ್ಮನ್ನು ನೋಡಬೇಕು.. ಇನ್ನರ್ಧ ಗಂಟೇಲಿ ನಿಮ್ಮ ಮನೇಲಿ ಇರ್ತೀನಿ’

‘ಅರೆ.... ಬೆಳಗಾಗುತ್ತಿದೆ ಈಗಿನ್ನ... ಸಂಜೆಗೆ ಸಿಗ್ತೀನಿ... ಶಾಲೆ ಹತ್ತಿರ ಬರ್ತೀನಿ’

‘ಶಾಲೇಲಿ ವೋಟಿಂಗ್ ನಾಳೆ... ನೀವು ಹೋಟೆಲ್ ಹತ್ತಿರ ಬನ್ನಿ.. ಅಥವಾ ನಾನು ಮನೆಗೆ ಬರ್ತೀನಿ...’

‘ವಿಶ್ವಾಸ್...’

‘ನಿಮ್ಮ ಗಂಡ ತುಂಬಾ ಬುದ್ಧಿವಂತರು... ನೂರೆಂಟು ಗರ್ಲ್ ಫ್ರೆಂಡ್ಸ್ ಇದ್ರೂ... ನಿಮ್ಮನ್ನು ಎಂಟು ದಿನ ಎಡಬಿಡದೆ ಕರೆದುಕೊಂಡು ಹೋಗಿದ್ದು ಯಾಕೆ ಅಂದುಕೊಂಡ್ರಿ? ಎಲ್ಲಾ ವೋಟು ಅವರಿಗೇ ಬರುತ್ತೆ ಅಂತ ಚೆನ್ನಾಗಿ ಗೊತ್ತು ಅವರಿಗೆ.. ಮೊದಲು ಬಾರಿ ನಿಂತಿರೋದು ಅಲ್ವಾ?... ಜನರಿಗೆ ಅವರೇನು ಗೊತ್ತು...? ನಿಮ್ಮ ಮುಖ ನೋಡಿ ಜನ ನಮ್ಮ ಮನೆ ಮಗಳು... ಪಾಪ ಒಂದು ವೋಟು ಕೇಳಲು ಬಿಸಿಲಲ್ಲಿ ಬಂದಿದಾಳೆ ಅಂತ ಅವರು ಬಿಸಿಲಲ್ಲಿ ಬಂದು ಕ್ಯೂನಲ್ಲಿ ನಿಂತು ವೋಟು ಹಾಕ್ತಾರೆ...’

‘ಸಾಕು.. ಸಾಕು... ಸಂಜೆ ಸಿಗ್ತೀನಿ...’ ಸ್ವಿಚ್ ಒತ್ತಿ ಡಿಸ್ಕನೆಕ್ಟ್ ಮಾಡಿದೆ.

ಫೋನ್ ತಿರುಗಿ ರಿಂಗಾದಾಗ ಅದರತ್ತ ನೋಡಿದೆ. ವಿಶ್ವಾಸ್... ಸ್ವಿಚ್ ಒತ್ತಿದೆ...

‘ಎಲ್ಲಿ ಸಿಗ್ತೀರಿ ಅಂತ ಹೇಳಲಿಲ್ಲ...’

‘ನಾನೇ ಬರ್ಲಾ ಮನೆಗೆ?’

‘ಮನೆ ತುಂಬಾ ಜನ ಇರ್ತಾರೆ... ನಾನೇ ಬರ್ತೀನಿ ಹೋಟೆಲ್ ಹತ್ತಿರ... ಫೈವ್ ಒ ಕ್ಲಾಕ್?..’

‘ಸೀ ಯು...’

ಫೋನ್ ಡಿಸ್‌ಕನೆಕ್ಟ್ ಮಾಡುವ ಮುನ್ನ ವಿಶ್ವಾಸ್ ಮುತ್ತಿಟ್ಟನೆ?.. ನನ್ನ ವಯಸ್ಸೇನು? ಆಡುತ್ತಿರುವುದು ಹೇಗೆ? ವಿಶ್ವಾಸನಿಗೆ ತಿಳಿಸಿ ಹೇಳುವ ಅವನನ್ನು ದೂರವಿಡುವ ಶಕ್ತಿ ನನಗಿದೆಯೇ? ದೂರವಿಡಬೇಕೇಕೆ?...

ತಲೆ ಕೊಡವಿಕೊಂಡು ಹಾಸಿಗೆಯಿಂದ ಎದ್ದು ಹರಡಿದ್ದ ಕೂದಲನ್ನು ಬೆರಳುಗಳಲ್ಲಿ ಸರಿ ಮಾಡಿಕೊಂಡು ಗಂಟು ಹಾಕಿಕೊಂಡೆ.

* * *

‘ವಿಶ್ವಾಸ್... ನಂಗೆ ಹೆದರಿಕೆ ಆಗ್ತಾ ಇದೆ’

‘ಹೆದರಿಕೆ ಯಾಕೆ?’

**ಕಂಬನಿ**

ಒಂದೊಂದಾಗಿ
ಕಳಚುತ್ತಿವೆ
ಕನ್ನಡದ ಕೊಂಡಿಗಳು
ಕನ್ನಡ
ಸಾಹಿತ್ಯದ ಬಂಡಿಗಳು
ಕನ್ನಡದ
ತೇರನ್ನೆಳೆದ ಮಂದಿಗಳು

–ಗೀತಾ ಶಾಸ್ತ್ರಿ



ಈಶ್ವರ

ಯಾಕೆ ಎಂದು ಪ್ರಶ್ನಿಸಿದರೂ ಅವನ ದನಿಯಲ್ಲಿಯೂ ನಡುಕವಿತ್ತು. ಆಗಷ್ಟೇ ಅವನ ತಾಯಿಯೊಂದಿಗೆ ಮಾತನಾಡಿದ್ದ. ಎಲ್ಲಾ ಸುದ್ದಿ ಚಾನೆಲ್‌ಗಳಲ್ಲಿಯೂ ನನ್ನದೇ ಸುದ್ದಿ. ನನ್ನದೇ ಫೋಟೊ. ಕಾಣೆಯಾಗಿರುವ ವಿಕ್ರಂ ಹಳ್ಳಿಮನೆಯವರ ಪತ್ನಿ!.. ಚೆಲುವೆ, ಎರಡು ಮುದ್ದಾದ ಮಕ್ಕಳ ತಾಯಿ. ಶ್ರೀಮಂತ ಹಳ್ಳಿಮನೆ ಕುಟುಂಬದ ಏಕೈಕ ಸೊಸೆ, ಕ್ಷೇತ್ರದ ಎಂ.ಎಲ್.ಎ ವಿಕ್ರಂ ಹಳ್ಳಿಮನೆಯವರ ಪತ್ನಿ ಕಾಣೆಯಾಗಿದ್ದಾರೆ... ಯಾರೋ ದುಷ್ಕರ್ಮಿಗಳು ಅವರನ್ನು ಹೊತ್ತುಕೊಂಡು ಹೋಗಿದ್ದಾರೋ? ಅವರೇ ಮನೆ ಬಿಟ್ಟು ಹೋಗಿದ್ದಾರೋ? ಒಬ್ಬರೇ ಹೋಗಿದ್ದಾರೋ?... ಎಂಬ ಹತ್ತು ಹಲವು ಪ್ರಶ್ನೆಗಳು ಉದ್ಭವಿಸಿವೆ.. ಎಂದು ಚಾನೆಲ್ಲೊಂದರ ಸುದ್ದಿವಾಚಕಿ ಹೇಳುತ್ತಿದ್ದುದನ್ನು ವಿಶ್ವಾಸನ ತಾಯಿ ಫೋನ್ ಮೂಲಕ ಕೇಳಿಸಿದ್ದರು.

ಕ್ಷೇತ್ರದ ಎಂ.ಎಲ್.ಎ.. ಮುಂದಿನ ಕ್ಯಾಬಿನೆಟ್ ವಿಸ್ತರಣೆಯಲ್ಲಿ ಮಂತ್ರಿ ಕೂಡ ಆಗುತ್ತಾರೆ ವಿಕ್ರಂ. ಅವರಿಗೆ ಬೇಕಾದ್ದು ಆಗುತ್ತಿದೆ. ಅದಕ್ಕೆ ಸಹಕಾರ ಕೊಟ್ಟೇ ನಾನು ಹೊರಟು ಬಂದಿದ್ದು... ಮತ್ತೆ ಹೀಗೆ ಸುದ್ದಿ ಏಕೆ ಮಾಡುತ್ತಿದ್ದಾರೆ?

‘ನೀವು ಎಲೆಕ್ಷನ್ನಿನಲ್ಲಿ ಗೆದ್ದ ಮೇಲೆ ನನಗೆ ಬಿಡುಗಡೆ ಬೇಕು.. ಎಂದಿದ್ದೆ. ನಿನ್ನ ಇಷ್ಟ... ಹಿಂತಿರುಗಿ ಬರುವ ಹಾಗಿಲ್ಲ ಎಂದಿದ್ದರು ಆಗ. ಈಗ ನನ್ನ ಪ್ರೀತಿಯ ಹೆಂಡತಿ ಕಾಣೆಯಾಗಿದ್ದಾಳೆ... ಯಾರೋ ಕರೆದುಕೊಂಡು ಹೋಗಿಬಿಟ್ಟಿದ್ದಾರೆ ಎಂದೆಲ್ಲಾ ಪೊಲೀಸ್ ಕಂಪ್ಲೆಂಟ್ ಏಕೆ? ಟಿ.ವಿ. ಚಾನೆಲ್ಲುಗಳಲ್ಲಿ ಸುದ್ದಿಯೇಕೆ?’

‘ಹೇಳದೆ ಬಂದಿದ್ದಲ್ಲ ವಿಶ್ವಾಸ್... ನಾನು ಎಲ್ಲಿಗೆ, ಹೇಗೆ ಹೋಗುತ್ತೇನೆ ಎಂದು ಗೊತ್ತಿಲ್ಲದಿದ್ದರೂ ನಾನು ಇರುವುದಿಲ್ಲ... ಹೋಗುತ್ತಿದ್ದೇನೆ... ನನ್ನದೇ ಬೇರೊಂದು ಹೊಸ ಜೀವನ ಕಟ್ಟಿಕೊಳ್ಳಲು ಹವಣಿಸುತ್ತಿದ್ದೇನೆ ಎಂದು ವಿಕ್ರಂಗೆ ಗೊತ್ತು... ಗೊತ್ತಿದ್ದೂ ಯಾಕೆ ಹೀಗೆ ಸುದ್ದಿ ಮಾಡುತ್ತಿದ್ದಾರೆ?’

‘ರಿಲ್ಯಾಕ್ಸ್... ಏನೂ ಆಗೊಲ್ಲ... ಇನ್ನೆರಡು ದಿನ ನೋಡೋಣ. ಈ ಸುದ್ದಿ ಹಾಗೇ ತಣ್ಣಗಾಗದಿದ್ದರೆ... ನಾವೇ ಚಾನೆಲ್ಲುಗಳನ್ನು ಸಂಪರ್ಕಿಸಿ, ನೀನು ಸೇಫಾಗಿದ್ಯ... ವಿಕ್ರಂ ಹೆಂಡತಿಯಾಗಿ ಬಾಳುವೆ ಮಾಡಿದ್ದು ಸಾಕು ಎಂದು ಹೊರಬಂದಿರುವುದು ಎಂದು ಹೇಳಿದರೆ ಆಯ್ತು’

‘ಹೂಂ...’

ಇಲ್ಲಿ ಮುಂಬಯಿಯ ಕುರ್ಲಾದ ಮೂಲೆಯೊಂದರಲ್ಲಿ ಇರುವ ಈ ಪುಟ್ಟ ಫ್ಲಾಟಿನಲ್ಲಿ ಟಿ.ವಿ.ಯಿಲ್ಲ... ಫ್ಲಾಟಿನ ಓನರ್ ಬಿಟ್ಟುಕೊಟ್ಟಿರುವ ಮಂಚ, ಫ್ರಿಜ್, ಸ್ಟವ್ ಸೋಫಾ ಅಷ್ಟೇ... ಈ ಒಂದು ಕೋಣೆಯ ಫ್ಲಾಟಿನಲ್ಲಿ ಇರುವುದು. ಇಲ್ಲಿಗೆ ಬಂದು ಮೂರು ದಿನ ಆಗಿದೆ... ಮೊನ್ನೆ ಹೋಗಿ ಡಬ್ಬಗಳು, ದಿನಸಿ, ಪಾತ್ರೆ ಎಲ್ಲಾ ತಂದಾಯಿತು.

ನಿಜ. ಹೋಗುತ್ತೇನೆ ಎಂದು ಹೊರಡುವ ಮುನ್ನ ಹೇಳಿ ಹೊರಡಲಿಲ್ಲ. ಆದರೆ ಅವರು ಗೆದ್ದ ಮೇಲೆ ನಾನು ಹೊರಡುತ್ತೇನೆ ಎಂದು ಗೊತ್ತಿತ್ತು ಅವರಿಗೆ. ಗೆದ್ದಾಗಿತ್ತು. ಮನೆಯ ತುಂಬಾ ಹೂವಿನ ಹಾರಗಳು, ಬೊಕೆಗಳು, ಬಗ್ಗಿ ಸಲಾಮು ಹೊಡೆಯುವ ಕಾಲು ಹಿಡಿಯುವ ಭಟ್ಟಂಗಿಗಳು... ಸಿಹಿ ಡಬ್ಬಗಳು... ಅತ್ತೆ ತರಿಸಿದವು... ಬಂದವರು ತಂದುಕೊಟ್ಟವು... ಮನೆಯಲ್ಲಿ ಚೆಲ್ಲಾಡುತ್ತಿರುವ ಸಿಹಿ ತಿಂಡಿಗೆ ಸಾಲುಗಟ್ಟಿ ಬಂದಿರುವ ಇರುವೆಗಳು... ಅವರು ರಾಜಕೀಯ ಸೇರಿದ ಮೇಲೆ ಏನಾಗುತ್ತದೆ ಎಂದುಕೊಂಡಿದ್ದೆನೋ ಅದೇ ಆಗಲು ಶುರುವಾಗಿತ್ತು ಮನೆಯಲ್ಲಿ.

‘ಮೀರಾಗೆ ಹೇಳಿ, ಸ್ತ್ರೀಶಕ್ತಿಯನ್ನು ಸಾಧ್ಯವಾದರೆ ನಡೆಸಿಕೊಂಡು ಹೋಗಲು ಹೇಳಿದ್ದೆ..’

‘ಬೇಡ.. ಬೇಡ ಮೇಡಂ.. ತುಂಬಾ ಕಷ್ಟ ಆಗುತ್ತೆ... ಇನ್ನೊಮ್ಮೆ ಯೋಚಿಸಿ... ಒಂಟಿಯಾಗಿ ಬದುಕುವುದು ಸುಲಭವಲ್ಲ... ವಿಶ್ವಾಸ್ ಜೊತೆ ಇರುತ್ತೀರಿ ಅಂದುಕೊಂಡರೆ ಅದು ಇನ್ನೂ ಕಷ್ಟ...’

ವಯಸ್ಸು ಮೂವತ್ತು ದಾಟಿ... ಒಂಟಿಯಾಗಿ ನಿಂತಿದ್ದ ಮೀರಾ ಕಂಗಳಲ್ಲಿ ನೀರು ತುಂಬಿಕೊಂಡು ಹೇಳಿದ್ದಳು.

‘ಮೀರಾ... ಈಗ ನಾನಿರುವ ಪರಿಸ್ಥಿತಿಯ ಕಷ್ಟವನ್ನು ನೀನು ಕಲ್ಪಿಸಿಕೊಳ್ಳಲಾರೆ. ಒಂಟಿಯಾಗಿ ಇರಬೇಕು ಅನ್ನುವುದಕ್ಕಿಂತ ನನ್ನ ಕಾಲ ಮೇಲೆ ನಾನು ನಿಂತುಕೊಳ್ಳಬೇಕು. ನಮ್ಮ ಹಂಗಿಲ್ಲದೆ, ನನ್ನ ಹೆಂಡತಿ ಎಂಬ ರಕ್ಷೆಯಿಲ್ಲದೆ ನೀನು ಬದುಕಲಾರೆ ಎನ್ನುವ ಇವರಿಗೆ ಬದುಕಿ ತೋರಿಸಬೇಕು. ಅವಮಾನವಾಗಿದೆ ನನಗೆ ಮೀರಾ. ಹೆದರಬೇಡ.. ವಿಶ್ವಾಸನಿಗೆ ನಿಧಾನವಾಗಿ ನನ್ನ ಅವನ ಸಂಬಂಧ ಸಾಧ್ಯವಿಲ್ಲ ಎಂದು ಮನವರಿಕೆ ಮಾಡಿಕೊಡುತ್ತೇನೆ.